# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ: ಕೇಂದ್ರ ಕಚೇರಿ : ಬೆಂಗಳೂರು

ಸಂಖ್ಯೆ:ಬೆಂಮಸಾ/ಕೇಕ/ ಸಿಟಿಎಂ(ಆ)/ 543 /19-20 ದಿನಾಂಕ: 01-06-2019

ಗೆ.

ಎಲ್ಲಾ ಪತ್ರಿಕಾ ಸಂಪಾದಕರು,
/ಎಲ್ಲಾ ಸುದ್ದಿ ಸಂಪಾದಕರು,
ಬೆಂಗಳೂರು.

ಮಾನ್ಯರೆ,

ವಿಷಯ: 2018-19ರ ಸಾಲಿನ ಸ್ಮಾರ್ಟ್ ಕಾರ್ಡ್ ಮಾದರಿ ವಿದ್ಯಾರ್ಥಿ ಪಾಸುಗಳ ಮಾನ್ಯತೆ ಅವಧಿ ವಿಸ್ತರಣೆ ಬಗ್ಗೆ.

--

ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ, ಈಗಾಗಲೇ ಶಾಲಾ-ಕಾಲೇಜುಗಳು ಆರಂಭವಾಗಿರುವ ಹಿನ್ನೆಲೆಯಲ್ಲಿ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ವತಿಯಿಂದ ಈ ಹಿಂದಿನ ಸಾಲಿನಲ್ಲಿ ಅಂದರೆ 2018-19ರಲ್ಲಿ ವಿತರಿಸಿರುವ ಸ್ಮಾರ್ಟ್ ಕಾರ್ಡ್ ಮಾದರಿಯ ವಿದ್ಯಾರ್ಥಿ ರಿಯಾಯಿತಿ ಪಾಸುಗಳನ್ನು, ಶಾಲಾ-ಕಾಲೇಜುಗಳಲ್ಲಿ ನೀಡಿರುವ ಈಗಿನ ಗುರುತಿನ ಚೀಟಿಯೊಂದಿಗೆ ದಿನಾಂಕ 20-6-2019ರ ವರೆಗೆ ಬೆಂ.ಮ.ಸಾ.ಸಂಸ್ಥೆಯ ವಾಹನಗಳಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳು ಪ್ರಯಾಣಿಸಲು ಅನುಮತಿಸಲಾಗಿರುತ್ತದೆ.

ಈ ಮಾಹಿತಿಯನ್ನು ತಮ್ಮ ಅಮೂಲ್ಯವಾದ ದಿನಪತ್ರಿಕೆಗಳಲ್ಲಿ /ಸುದ್ದಿ ಮಾಧ್ಯಮಗಳಲ್ಲಿ ಸಾರ್ವಜನಿಕರ ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳ ಗಮನಕ್ಕೆ ತರುವ ಸಲುವಾಗಿ ಪ್ರಕಟಿಸಲು ಕೋರಲಾಗಿದೆ. ಮುಂದುವರೆದು, 2019-20ನೇ ಸಾಲಿನ ಶಾಲಾ-ಕಾಲೇಜು ವಿದ್ಯಾರ್ಥಿ ರಿಯಾಯಿತಿ ಪಾಸು ವಿತರಣೆ ಮಾಹಿತಿಯನ್ನು ಶೀಘ್ರದಲ್ಲಿಯೇ ತಿಳಿಸಲಾಗುವುದು.

(ಸಹಿ)
ಮುಖ್ಯ ಸಂಚಾರ ವ್ಯವಸ್ಥಾಪಕರು (ಆಚರಣೆ)
ಬೆಂ.ಮ.ಸಾ.ಸಂಸ್ಥೆ: ಬೆಂಗಳೂರು.